
# ಶ್ರೀರಾಮಕೃಷ್ಣರು ಮತ್ತು ಕರ್ನಾಟಕದ ಹರಿದಾಸರು

ಡಾ. ಎಚ್.ಎನ್. ಮುರಳೀಧರ



ಶ್ರೀರಾಮಕೃಷ್ಣರು ಮತ್ತು ಕರ್ನಾಟಕದ ಹರಿದಾಸರ ದೇಶ ಕಾಲಗಳು ಬೇರೆ ಬೇರೆ. ಹೀಗಾಗಿ ಇವರನ್ನು ಒಟ್ಟಿಗೆ ಇಟ್ಟು ನೋಡುವಾಗ ನಮ್ಮ ಗ್ರಹಿಕೆಯ ನೆಲೆಗಳು ಏನಾಗಬೇಕು? ಈ ಪ್ರಶ್ನೆ ಇಲ್ಲಿ ಮೊದಲಿಗೆ ಮುನ್ನೆಲೆಗೆ ಬರುತ್ತದೆ. ಇದಕ್ಕೆ ಪರಿಹಾರವಾಗಿ ಕಂಡುಕೊಳ್ಳಬಹುದಾದ ದಾರಿಗಳಲ್ಲಿ ಒಂದು ಇದು: ಯಾವುದೇ ದೇಶಕಾಲಗಳಲ್ಲಿ ರೂಪುಗೊಳ್ಳುವ ಸಂಚಲನವೊಂದು ಶೂನ್ಯದಲ್ಲಿ ನಿರ್ಮಾಣವಾಗುವುದಿಲ್ಲ. ಅದು ಕೆಲವೊಂದು ನಿರ್ದಿಷ್ಟ ಸೈದ್ಧಾಂತಿಕ, ಧಾರ್ಮಿಕ, ಮತೀಯ, ಸಾಮಾಜಿಕ ಸಂದರ್ಭಗಳಿಗೆ ಪ್ರತಿಕ್ರಿಯಾತ್ಮಕವಾಗಿಯೂ ರೂಪುಗೊಳ್ಳುತ್ತಿರುತ್ತದೆ. ಹೀಗೆ ತೋರಿದ ಪ್ರತಿಕ್ರಿಯೆಗಳಲ್ಲಿನ ಸಮಾನಾಂತರತೆಗಳೋ ವೈಸಾದೃಶ್ಯಗಳೋ ಅಧ್ಯಯನಕ್ಕೆ ಸ್ವಾರಸ್ಯಕರ ಹಿನ್ನೆಲೆಯನ್ನು ಒದಗಿಸಬಲ್ಲವು. ಶ್ರೀರಾಮ ಕೃಷ್ಣರನ್ನು ಹಾಗೂ ಕರ್ನಾಟಕದ ಹರಿದಾಸರನ್ನು ಈ ದೃಷ್ಟಿಕೋನ ದಿಂದ ನೋಡುವ ಪ್ರಯತ್ನ ಕೆಲವೊಂದು ಕುತೂಹಲಗಳಿಗೆ ನಮ್ಮನ್ನು ತೆರೆಯಬಲ್ಲುದು.

ಶ್ರೀರಾಮಕೃಷ್ಣರಿಗೂ ಕನ್ನಡದ ಹರಿದಾಸರಿಗೂ ಮಾಡುವ ಹೋಲಿಕೆ ಕೆಲವು ವಿಶಿಷ್ಟ ಅಂಶಗಳನ್ನು ಅನಾವರಣಗೊಳಿಸುತ್ತದೆ. ಅಂತಹ ಪಾಂಡಿತ್ಯಪೂರ್ಣ ಪ್ರಯತ್ನವನ್ನು ಮಾಡಿರುವ ಲೇಖಕರು ಬೆಂಗಳೂರಿನ ವಿ.ವಿ.ಎಸ್.ಎಲ್. ಪದವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು; ಉತ್ತಮ ಕವಿಗಳು, ಲೇಖಕರು ಹಾಗೂ ಅಮೋಘ ವಾಗ್ಮಿಗಳು. ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.

ಅಧ್ಯಾತ್ಮಕ್ಕೂ ಸಾಧನೆಗೂ ಸಂಬಂಧಿಸಿದಂತೆ ಶ್ರೀರಾಮಕೃಷ್ಣರಿಗೂ ಹರಿದಾಸರಿಗೂ ಸಮಾನವಾದ ನೆಲೆಗಟ್ಟೊಂದಿದೆ. ಅವರ ಪ್ರಕಾರ ಎಂತಹ ತತ್ತ್ವವಾಗಲಿ, ಸಿದ್ಧಾಂತವಾಗಲಿ ಅನುಭವದಲ್ಲಿ ನಿಜವಾಗ ಬೇಕು. ಅನುಭವಕ್ಕೆ ಬಾರದ ಒಣಪಾಂಡಿತ್ಯವನ್ನು ಶ್ರೀರಾಮಕೃಷ್ಣರು ನಿರಾಕರಿಸಿದರು. ಅಂಥ ಶುಷ್ಕ ಪಾಂಡಿತ್ಯವನ್ನು 'ಅಕ್ಕಿ-ಬಾಳೆಹಣ್ಣು ಗಂಟು ಕಟ್ಟುವ ವಿದ್ಯೆ' ಎಂದರು. ಅಂತಹ ಪಂಡಿತರನ್ನು ಎತ್ತರದಲ್ಲಿ ಹಾರುವ ಹದ್ದುಗಳಿಗೆ ಹೋಲಿಸಿದರು. ಈಜು ಬಾರದ ಪಂಡಿತನ ಸಾಮತಿಯಲ್ಲಂತೂ ಅವರ ನಿಲುವು ಅತ್ಯಂತ ದಿಟ್ಟವಾಗಿ ಪ್ರಕಟ ವಾಗಿದೆ.

ಕನ್ನಡದ ಹರಿದಾಸರಿಗಂತೂ ಈ ಬಗೆಯ ಪಾಂಡಿತ್ಯ ನಿರಾಕರಣೆ ಒಂದು ಬಗೆಯ ವ್ರತವೇ ಆಯಿತೆನ್ನಬೇಕು. ವ್ಯಾಸ ಕೂಟ-ದಾಸಕೂಟಗಳ ನಡುವಿನ ಮುಖಾಮುಖಿಗಳು ರೂಪು ಗೊಂಡದ್ದರ ಹಿನ್ನೆಲೆಯಲ್ಲಿ ಇದನ್ನು ನಾವು ಗುರುತಿಸಬಹುದು. ದಿವಂಗತ ಸಾ.ಕೃ. ರಾಮಚಂದ್ರರಾವ್ ಅವರು ಹೀಗೆ ಬರೆಯು ತ್ತಾರೆ: "(ದಾಸರ) ಪಾಲಿಗೆ ಸಿದ್ಧಾಂತಕ್ಕಿಂತ ಸಾಧನೆ ಮುಖ್ಯ ವಾದುದು ........ನಿಷ್ಠಾವಂತರಾದ, ಶಾಸ್ತ್ರೈಕನಿಷ್ಠರಾದ, ಸ್ವಮತ ಮಂಡನೆ-ಪರಮತ ಖಂಡನೆಯೇ ಪರಮಾರ್ಥಕ್ಕೆ ದಾರಿ ಎಂದು ಹಟ ಹಿಡಿದ ಮಡಿಮಡಿಯ ಗುಂಪಿಗೆ ವ್ಯಾಸಕೂಟವೆಂದು ಹೆಸರಾಯಿತು. ಇದಕ್ಕೆ ಸೇರಿದವರಿಗೆ ಸಂಸ್ಕೃತ ಪಾಂಡಿತ್ಯ, 'ಸಚ್ಛಾಸ್ತ್ರ' ವ್ಯಾಸಂಗ, ಸಿದ್ಧಾಂತ ಪ್ರಮೇಯಗಳ ಯುಕ್ತಿಯುಕ್ತ ಸಮರ್ಥನೆ, ಶಾಸ್ತ್ರಾಭ್ಯಾಸದಿಂದ ಬಂದ ಜ್ಞಾನ, ವರ್ಣಾಶ್ರಮಧರ್ಮಗಳ ಪಾಲನೆ ಇವು ಮುಖ್ಯವಾದವು. ಭಕ್ತಿಯ ಅಗತ್ಯವನ್ನು ಪ್ರಮೇಯವಾಗಿ ಗ್ರಹಿಸಿದರೂ ಅವರ ಒಲವೆಲ್ಲ ಜ್ಞಾನದ ಕಡೆಯೇ. ಸಾಧನೆಯ ಸ್ವಾರಸ್ಯವನ್ನು ಅವರು ಗ್ರಂಥಗಳಲ್ಲಿ ಬಲ್ಲರೇ ವಿನಾ ಅನುಭವದಲ್ಲಿ ಕಂಡರಿಯರು. ಆದರೆ ದಾಸಕೂಟದವರಿಗೆ ಭಕ್ತಿ ಮುಖ್ಯ, ಶಾಸ್ತ್ರಜ್ಞಾನ ಗೌಣ; ಸಾಧನೆಯ ಅನುಭವ ಮುಖ್ಯ, ಸಿದ್ಧಾಂತ ಗೌಣ...... ಸಾಧನೆಯೆಂದರೆ ಭಗವತ್ತತ್ತ್ವ, ಸಾಕ್ಷಾತ್ಕಾರ, ಭಕ್ತಿ ಇವು" (ದಾಸ ಸಾಹಿತ್ಯ ಮತ್ತು ಸಂಸ್ಕೃತಿ, ಪು.೧೩೫-೧೩೬). ಹೀಗಾಗಿ ಅನುಭವದಲ್ಲಿ ನಿಜವಾಗದ ಎಲ್ಲ ಪಾಂಡಿತ್ಯವನ್ನೂ ದಾಸರು ತಿರಸ್ಕರಿಸುತ್ತಾರೆ. "ಪಂಚಾಂಗದಲ್ಲಿ ಈ ಸಲ ಇಷ್ಟು ಕೊಳಗ ಮಳೆ ಬರುತ್ತದೆ ಎಂದು ಬರೆದಿರುತ್ತದೆ. ಆದರೆ ಪಂಚಾಂಗವನ್ನು ಹಿಂಡಿದರೆ ಒಂದು ತೊಟ್ಟು ನೀರು ಬೀಳದು" ಎಂಬ ಶ್ರೀರಾಮ ಕೃಷ್ಣರ ಮಾತನ್ನು ಇಲ್ಲಿ ನೆನೆಯಬಹುದು. 'ಎಲ್ಲಾನು ಬಲ್ಲೆನೆಂಬು ವಿರಲ್ಲ ಅವಗುಣ ಬಿಡಲಿಲ್ಲ' ಎಂದ ದಾಸರು ಒಮ್ಮೊಮ್ಮೆ 'ಪಿಂಡಾಂಡದೊಳಗಿನ ಗಂಡನ ಕಾಣದೆ ಮುಂಡೇರಾದರು ಪಂಡಿತರು' ಎನ್ನುವವರೆಗೂ ಹೋದರು.

ಶ್ರೀರಾಮಕೃಷ್ಣರು ಹಲವು ಭಾವಗಳನ್ನು ಅವಲಂಬಿಸಿ ಸಾಧನೆ ಮಾಡಿದವರು. ಅವುಗಳಲ್ಲಿ ಹನುಮಂತನ ದಾಸ್ಯಭಾವವೂ ಒಂದು. ಅಹಂಕಾರದ ನಿರಸನಕ್ಕಾಗಿ ದಾಸ್ಯಭಾವದ ಅಗತ್ಯವನ್ನು ಶ್ರೀರಾಮ ಕೃಷ್ಣರು ಹೇಳುತ್ತಾರೆ. "ಈ ನೀಚಮುಂಡೇದು ಬಡಪೆಟ್ಟಿಗೆ ಹೋಗು ವುದಿಲ್ಲವಾದ್ದರಿಂದ ಭಗವಂತನ ದಾಸನಾಗಿ ಬಿದ್ದಿರಲಿ" ಎನ್ನುತ್ತಾರೆ ಅವರು. 'ಹಂಬಾ ಹಂಬಾ' (ನಾನು, ನಾನು) ಎನ್ನುತ್ತ ಕಷ್ಟಗಳ ಸರಮಾಲೆಯಲ್ಲಿ ಸಿಲುಕಿದ ಹಸು ಕೊನೆಗೆ **'ತುಹೂ ತುಹೂ'** (ನೀನು ನೀನು) ಸ್ಥಿತಿಯನ್ನು ತಲುಪಿದಾಗ ಕಷ್ಟಗಳಿಂದ ಪಾರಾಯಿತು ಎನ್ನುವುದು ಶ್ರೀರಾಮಕೃಷ್ಣರ ಪ್ರಸಿದ್ಧವಾದ ಸಾಮತಿ. **'ನಾನಲ್ಲ, ನಾನಲ್ಲ; ನೀನು, ನೀನು'** ಎನ್ನುವುದು ಆಗಾಗ ಹಾಡಿನ ಪಲ್ಲವಿಯೊಂದರಂತೆ ಶ್ರೀರಾಮಕೃಷ್ಣರ ಬಾಯಿಂದ ಹೊರಹೊಮ್ಮು ತ್ತಿದ್ದ ಮಾತುಗಳು. **'ಎಲ್ಲವೂ ನಿನ್ನಿಚ್ಛೆಯಂತೆ ನಡೆದಿರಲು ನೀನು ಭವಸಾಗರವ ದಾಟಿಸುವ ಹಡಗು'** ಎಂದು ಮೊದಲಾಗುವ ದಾಶರಥಿಯ ಹಾಡನ್ನು ಅವರು ಬಹಳವಾಗಿ ಮೆಚ್ಚಿಕೊಂಡು ಹಾಡುತ್ತಿದ್ದರು. ಅಲ್ಲದೆ, ಶ್ರೀರಾಮಕೃಷ್ಣರ ಪ್ರಕಾರ ಭಗವಂತನ ದಾಸತ್ವವೆನ್ನುವುದು ಶಕ್ತಿಯ ಪ್ರತೀಕವೂ ಹೌದು. "ಲಂಕೆಯನ್ನು ಸೇರಲು ಸ್ವಯಂ ಶ್ರೀರಾಮಚಂದ್ರ ಸಮುದ್ರಕ್ಕೆ ಸೇತುವೆಯನ್ನು ಕಟ್ಟಬೇಕಾಯಿತು. ಆದರೆ ಅವನ ದಾಸನಾದ ಹನುಮಂತ ಒಂದೇ ನೆಗೆತಕ್ಕೆ ಸಮುದ್ರ ದಾಟಿಬಿಟ್ಟ" ಎಂಬ ರೂಢಿಯ ಮಾತನ್ನು ಶ್ರೀರಾಮಕೃಷ್ಣರು ಉದ್ಧರಿಸುತ್ತಾರೆ.

ದಾಸತ್ವವೆನ್ನುವುದು ನಿಷ್ಕ್ರಿಯತೆಯ ನೆಲೆಯಲ್ಲ ಎನ್ನುವುದು ಹರಿದಾಸರ ಅಭಿಮತ ಕೂಡ. ಅದು ಕೇವಲ 'ಒಪ್ಪಿಕೊಳ್ಳುವ' ಒಂದು ಸಂಗತಿಯಲ್ಲ; ಅದೊಂದು 'ಆಗುವ' ಕ್ರಿಯೆ, ಪರಿ ವರ್ತನೆಯ ಹಾದಿ. 'ದಾಸನ ಮಾಡಿಕೊ ಎನ್ನ' ಎಂಬ ಪುರಂದರ ದಾಸರ ಪ್ರಸಿದ್ಧವಾದ ಕೀರ್ತನೆಯನ್ನು ಇಲ್ಲಿ ನಿದರ್ಶನಕ್ಕಾಗಿ ಗಮನಿಸಬಹುದು. ಇಲ್ಲಿನ ಭಕ್ತಿಯ ಪ್ರಕ್ರಿಯೆಯಲ್ಲಿ ಭಕ್ತ ಹಾಗೂ ಭಗವಂತ ಇಬ್ಬರೂ ಕೆಲವೊಂದು ಅಗತ್ಯಗಳನ್ನು ಪೂರೈಸಬೇಕಾಗು ತ್ತದೆ. 'ದುರುಬುದ್ಧಿಗಳನ್ನು ಬಿಡು'ವುದು ಭಕ್ತನಿಗೆ ಸಂಬಂಧಿಸಿದ್ದು; 'ಕರುಣಕವಚವನ್ನು ಹರಣಕ್ಕೆ ತೊಡಿಸು'ವುದು ಭಗವಂತನಿಗೆ ಸಂಬಂಧಿಸಿದ್ದು. ಆದರೆ ಇಲ್ಲಿನ ಇನ್ನೊಂದು ಸ್ವಾರಸ್ಯವೆಂದರೆ ಸಾಧನೆಯ ಹಂತದಲ್ಲೇ ಒಂದು ಬಗೆಯ ಅಹಂನಿರಸನ ಇಲ್ಲಿ ವ್ಯಕ್ತವಾಗುತ್ತದೆ. ದುರುಬುದ್ಧಿಗಳನ್ನು 'ನಾನು ಬಿಡುತ್ತೇನೆ' ಎನ್ನುವುದಕ್ಕೆ ಬದಲಾಗಿ 'ನೀನು ಬಿಡಿಸಬೇಕಾಗಿದೆ' ಎನ್ನುವುದರ ಮೂಲಕ ತನ್ನ ಸಾಧನೆ-ಸಿದ್ಧಿಗಳೆರಡನ್ನೂ ಭಕ್ತ ಭಗವಂತನಿಗೆ ಒಪ್ಪಿಸುತ್ತಿದ್ದಾನೆ. ಹೀಗಾಗಿ ಇಲ್ಲಿ ಸಮರ್ಪಣೆ ಸಾಧನೆಯ ಅಂತ್ಯ ಮಾತ್ರವಲ್ಲ, ಆರಂಭವೂ ಹೌದು.

ಇದಲ್ಲದೆ ಇಲ್ಲಿನ ದಾಸತ್ವಕ್ಕೆ ಇನ್ನೊಂದು ಆಯಾಮವೂ ಇದೆ. ಹರಿದಾಸರ ಪ್ರಕಾರ ಭಗವಂತನ ದಾಸನಾಗುವುದೆಂದರೆ ಮತ್ತೆ ಯಾರ ದಾಸತ್ವವನ್ನೂ ಒಪ್ಪಿಕೊಳ್ಳದಿರುವುದು. ಇದು ದಾಸತ್ವದ 'ಮೀರುವಿಕೆ'ಯ ಆಯಾಮ. ಮುಖ್ಯವಾಗಿ, ಅರಸೊತ್ತಿಗೆಯ ವೈಭವದ ಕಾಲದಲ್ಲಿ ರಾಜನ ದಾಸನಾಗುವುದೇ ಜನ್ಮದ ಸಾರ್ಥಕತೆ

> ಇನ್ನೊಬ್ಬನಿಗೆ, ನಮ್ಮ ಸ್ವಾಧೀನತೆಯನ್ನು ಕೊಡುವಷ್ಟು ಸುರಕ್ಷಿತವೂ ಮತ್ತು ಸುಲಭವೂ ಆದ ದಾರಿ ಮತ್ತೊಂದಿಲ್ಲ. ಸ್ವಾಧೀನತೆಯನ್ನು ಕೊಡುವುದು ಎಂದರೆ ದೇವರಲ್ಲಿ ಶರಣಾಗುವುದು; ಯಾವ ವಿಧದದಲ್ಲೂ ನನ್ನದು ಎಂಬ ಭಾವವಿಲ್ಲದೆ ಇರುವುದು.
>
> –ಶ್ರೀರಾಮಕೃಷ್ಣ

ಯೆಂದು ಭಾವಿಸಿದ್ದಾಗ 'ಸಾಸಿರ ನಾಮದ ವೆಂಕಟರಮಣನ' ದಾಸತ್ವವನ್ನು ದಾಸರು ಪ್ರತಿಪಾದಿಸಿದರು. ರಾಜನ ಬಿರುದುಗಳು ಕೆಲವು; ಅಥವಾ ಹೆಚ್ಚೆಂದರೆ ಹಲವು. ಆದರೆ ವೆಂಕಟರಮಣ 'ಸಾಸಿರ ನಾಮ' ದವನು. ಹೀಗಾಗಿ ಈ ದಾಸತ್ವ ಬಿಡುಗಡೆಯ ಸಂಕೇತವೂ ಹೌದು. ದಾಸನಾದವನು ತನ್ನ ಅಂತರಂಗವನ್ನು ಗೆದ್ದು ಪ್ರಭುವಾಗುತ್ತಾನೆ. ಬಹುಶಃ ಈ ನಿಲುವೇ ಪ್ರಭುತ್ವವನ್ನು ನಿರಾಕರಿಸಲು ದಾಸರಿಗೆ ನೆಲೆಗಟ್ಟನ್ನು ಒದಗಿಸಿತೆನ್ನಬೇಕು. ಬ್ರಿಟಿಷ್ ಸಾಮ್ರಾಜ್ಯಶಾಹಿಯು ತಂದೊಡ್ಡಿದ ಸಾಂಸ್ಕೃತಿಕ ಗುಲಾಮಗಿರಿಯ ವಿರುದ್ಧ ಶ್ರೀರಾಮಕೃಷ್ಣರ ಪ್ರತಿಕ್ರಿಯೆಗಳು 'ವಚನವೇದ'ದಲ್ಲಿ ಅಲ್ಲಲ್ಲಿ ದಾಖಲಾಗಿರುವುದಕ್ಕೆ ಸಮಾನಾಂತರವಾಗಿಯೂ ಇದನ್ನು ನೋಡ ಬಹುದಾಗಿದೆ. ಉದಾ: ಅವರು ಬಂಕಿಮಚಂದ್ರ ಘೋಷನನ್ನು ಭೇಟಿಯಾದ ಪ್ರಸಂಗ.

ಹರಿದಾಸರಿಗೂ ಶ್ರೀರಾಮಕೃಷ್ಣರಿಗೂ ಸಮಾನಾಂತರವಾದ ಇನ್ನೊಂದು ನೆಲೆಯಿದೆ. ಅದೆಂದರೆ ಭಗವನ್ನಾಮಕ್ಕೆ ಅವರು ನೀಡಿದ ಮಹತ್ತ್ವ. "ಕಲಿಯುಗಕ್ಕೆ ನಾರದೀಯ ಭಕ್ತಿ", "ಭಗವಂತನ ನಾಮಸ್ಮರಣೆಯೇ ಉಪಾಯ" ಎಂಬಂತಹ ಮಾತುಗಳನ್ನು ವಚನವೇದದ ಉದ್ದಕ್ಕೂ ನೋಡಬಹುದು. 'ಕಲಿಯುಗದಲಿ ಹರಿನಾಮವ ನೆನೆದರೆ ಕುಲಕೋಟಿಗಳು ಉದ್ಧರಿಸುವವೋ ರಂಗ' ಎಂದರು ದಾಸರು. ಅಲ್ಲದೆ ಈ ನಾಮಸ್ಮರಣೆ ಒಂದು ಸಾಧನಾ ಮಾರ್ಗವಾಗಿ ಸ್ಥಾಪಿತವಾದದ್ದು ವೈದಿಕ ಕ್ರಿಯಾಕರ್ಮಗಳಿಗೆ ಪರ್ಯಾಯವಾಗಿ. ಶ್ರೀರಾಮಕೃಷ್ಣರಿಗೆ ಹೇಗೋ ಹಾಗೆಯೇ ದಾಸರಿಗೂ ಬಹಿರಂಗದಲ್ಲಿ 'ಮಾಡು'ವುದಕ್ಕಿಂತ ಅಂತರಂಗದಲ್ಲಿ 'ಆಗು'ವುದು ಮುಖ್ಯ. ಕೇವಲ 'ಮಾಡಿದವರು' ಏನೂ ಆಗದಿರ ಬಹುದು; ಆದರೆ 'ಆದವರು' ಮಾತ್ರ ಮಾಡುವಿಕೆಯ ಎಲ್ಲ ನೆಲೆಗಳನ್ನೂ ಮೀರಿ ಹೋಗುತ್ತಾರೆ. ಅವರು ಹೇಳುತ್ತಾರೆ, "ಯಾವಾಗ ನಿಮಗೆ ಹರಿನಾಮವನ್ನೋ ರಾಮನಾಮವನ್ನೋ ಒಮ್ಮೆ ಉಚ್ಚರಿಸಿದ ಮಾತ್ರದಿಂದಲೇ ರೋಮಾಂಚನವಾಗುವುದೊ, ಪ್ರೇಮಾಶ್ರು ಸುರಿಯುವುದೋ, ಆಗ ಕರ್ಮ ತನಗೆ ತಾನೇ ನಿಮ್ಮನ್ನು ಬಿಟ್ಟು ತೊಲಗಿ ಹೋಗುತ್ತದೆ." "ರಾಗಾಭಕ್ತಿ, ಪ್ರೇಮಾಭಕ್ತಿ, ಭಗವಂತ ತನ್ನವನೇ ಎಂಬ ಪ್ರೀತಿ ಉಂಟಾಯಿತು ಎಂದರೆ,

ಆಗ ವಿಧಿನಿಯಮಗಳಾವುವೂ ಬೇಕಾಗಿರುವುದಿಲ್ಲ ........" ಭಕ್ತನೊಬ್ಬ ಹಾಡುತ್ತಿದ್ದ ಈ ಸಾಲುಗಳು ಶ್ರೀರಾಮಕೃಷ್ಣರಿಗೆ ಪ್ರಿಯವಾಗಿದ್ದವು:

ಒಳಗೂ ಹೊರಗೂ ಆತನ ಕಾಣಲು ಈ ಜಪತಪದಿಂದೇನು;
ಒಳಗೂ ಹೊರಗೂ ಆತನ ಕಾಣದ ಈ ಜಪತಪದಿಂದೇನು?

ವೈದಿಕ ಕ್ರಿಯಾಕರ್ಮಗಳಿಗೆ, ಆಚರಣೆಗಳಿಗೆ ಕೆಲವರು ಅರ್ಹರಾಗುತ್ತಾರೆ, ಕೆಲವರು ಅನರ್ಹರಾಗುತ್ತಾರೆ; ಕೆಲವರಿಗೆ ಅದು ಸಾಧ್ಯವಾಗುತ್ತದೆ, ಕೆಲವರಿಗೆ ಅದು ಸಾಧ್ಯವಾಗುವುದಿಲ್ಲ. ಹೀಗಾಗಿ ಇವು ಸಮುದಾಯವನ್ನು ವಿಭಜಿಸುವಂಥವೂ ಹೌದು. ಆದರೆ 'ನಾಮಸ್ಮರಣೆ' ಹೊರಗಿನ ಈ ಎಲ್ಲ ಸಿದ್ಧತೆ, ಸಾಧ್ಯತೆಗಳನ್ನು ನಿರಾಕರಿಸುವುದರಿಂದ ಅದು ಎಲ್ಲರನ್ನೂ ಒಗ್ಗೂಡಿಸುವಂಥದೂ ಹೌದು. ಅದಕ್ಕೆ ಯಾರೂ ತಿರಸ್ಕೃತರಲ್ಲ.

ಸ್ನಾನವನರಿಯೆನು ಮೌನವನರಿಯೆನು
ಧ್ಯಾನವನರಿಯೆನೆಂದೆನಬೇಡ ......

ಅರ್ಚಿಸಲರಿಯೆನು ಮೆಚ್ಚಿಸಲರಿಯೆನು
ತುಚ್ಛನು ನಾನೆಂದೆನಬೇಡ .....

ಜಪವೊಂದರಿಯೆನು ತಪವೊಂದರಿಯೆನು
ಉಪದೇಶವಿಲ್ಲೆಂದೆನಬೇಡ .....

ಮರೆಯಬೇಡ ಮನವೆ ನೀನು ಹರಿಯ ಸ್ಮರಣೆಯ
ಯಾಗಯಜ್ಞ ಮಾಡಲೇಕೆ ಯೋಗಿಯತಿಯು ಆಗಲೇಕೆ
ನಾಗಶಯನ ನಾರದನುತನ ಕೂಗಿ ಭಜನೆ ಮಾಡೊ
ಹರಿಯ ಸ್ಮರಣೆ ಮಾತ್ರದಿಂದ ಘೋರದುರಿತವೆಲ್ಲ ನಾಶ.....

"ನಾನು ಭಗವಂತನ ಹೆಸರನ್ನು ಸ್ಮರಿಸಿದ್ದೇನೆ. ಇನ್ನು ನನ್ನಲ್ಲಿ ಪಾಪ ಅಂದರೆ ! ... " – ಸಾಧಕನಿಗೆ ಈ ಬಗೆಯ ಶ್ರದ್ಧೆ ಅಗತ್ಯವೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದುದನ್ನು ಇಲ್ಲಿ ನೆನೆಯಬಹುದು.

ಶ್ರೀರಾಮಕೃಷ್ಣರ ಹಾಗೂ ಹರಿದಾಸರ ತಾತ್ತ್ವಿಕ ನೆಲೆಗಟ್ಟುಗಳನ್ನು ಪಾರಿಭಾಷಿಕವಾಗಿ ವಿವರಿಸಲು ಹೊರಟಾಗ ಅವುಗಳಲ್ಲಿ ಸೂಕ್ಷ್ಮ ಭಿನ್ನತೆಗಳಿರುವುದು ಸಹಜವೆ. ಹೀಗಿದ್ದೂ ಸಾಧನೆಯ ನೆಲೆಗೆ ಬಂದಾಗ ಅವು ಅಚ್ಚರಿಯ ಸಾಮ್ಯಗಳನ್ನು ತೋರುವುದು ಸ್ವಾರಸ್ಯದ ಸಂಗತಿಯಾಗಿದೆ. ಉದಾಹರಣೆಗೆ ತಮ್ಮ ಹಾಗೂ ಜಗನ್ಮಾತೆಯ ಸಂಬಂಧದ ಬಗೆಗೆ ಶ್ರೀರಾಮಕೃಷ್ಣರು ಈ ರೀತಿಯ ಮಾತುಗಳನ್ನು ಹೇಳುತ್ತಿದ್ದರು: "ತಾಯಿ, ನೀನು ಯಂತ್ರಿ, ನಾನು ಯಂತ್ರ. ನೀನು ಚಲಿಸಿದಂತೆ ಚಲಿಸುತ್ತೇನೆ. ನಾನಲ್ಲ, ನಾನಲ್ಲ; ನೀನು, ನೀನು! " ಅವರು ಮತ್ತೆ ಮತ್ತೆ ಹಾಡುತ್ತಿದ್ದ ಹಾಡಿದು:

ಎಲ್ಲವೂ ನಿನ್ನಿಚ್ಛೆಯಂತೆ ನಡೆದಿರಲು
ನೀನೆ ಭವಸಾಗರವ ದಾಟಿಸುವ ಹಡಗು;
ನಿನ್ನ ಇಚ್ಛೆಯ ನೀನು ಪೂರೈಸುತಿರಲು
ತಮ್ಮ ಗೈಮೆಯಿದೆಂದು ತಿಳಿವರೀ ಜನರು! .....

ನೀನು ಚಾಲಕ ಶಕ್ತಿ, ನಾನೊಂದು ಯಂತ್ರ;
ನಾನೊಂದು ಬರಿಯ ಮನೆ ನೀನದರ ಮಂತ್ರ !
ನಾನೊಂದು ರಥವಾಗೆ ನೀನದರ ರಥಿಕ;
ನೀ ನಡೆಸೆ ನಾ ನಡೆವೆ, ನಿನ್ನದೀ ಲೋಕ!

ಶ್ರೀರಾಮಕೃಷ್ಣರ ಈ ನಿಲುವು ಕರ್ನಾಟಕದ ಹರಿದಾಸರ 'ಬಿಂಬೋಪಾಸನೆ'ಯ ತತ್ತ್ವಕ್ಕೆ ತುಂಬ ಹತ್ತಿರವಾಗಿರುವುದು ಕುತೂಹಲದ ಸಂಗತಿಯಾಗಿದೆ. ಈ ಸಿದ್ಧಾಂತದ ಪ್ರಕಾರ ಸರ್ವವ್ಯಾಪಿಯಾದ ಭಗವಂತನು (ಪಾರಿಭಾಷಿಕವಾಗಿ 'ವಿಷ್ಣು') ಶರೀರಧಾರಿಯಾದ ಜೀವಿಯ ಹೃದಯಾಂತರ್ಗತನಾದಾಗ 'ಹರಿ' ಎನ್ನಿಸಿಕೊಳ್ಳುತ್ತಾನೆ. ಈ ಹರಿಯು 'ಬಿಂಬ' ರೂಪಿಯಾದವನು. ಜೀವನು ಈತನ ಪ್ರತಿಬಿಂಬ. ಅಷ್ಟೇ ಅಲ್ಲ, ಬಿಂಬನ ವಶವರ್ತಿ, ಪರತಂತ್ರದಾಸ. ಆದರೆ ಅಜ್ಞಾನದಿಂದಾಗಿ ತಾನು ಸ್ವತಂತ್ರನೆಂಬ ಭ್ರಮೆಗೆ ಒಳಗಾಗುತ್ತಾನೆ. ಬಿಂಬರೂಪಿಯಾದ ಭಗವಂತನ ಅಖಂಡ ಧ್ಯಾನದಿಂದ, ಎಂದರೆ ಈ ಬಿಂಬತತ್ತ್ವವನ್ನು ಎಡೆಬಿಡದೆ ಮನಸ್ಸಿಗೆ ತಂದುಕೊಳ್ಳುವುದರಿಂದ ಈ ಅಜ್ಞಾನದಿಂದ ಪಾರಾಗಿ ಮುಕ್ತಿಯನ್ನು ಪಡೆಯುತ್ತಾನೆ (ದಾಸಸಾಹಿತ್ಯ ಮತ್ತು ಸಂಸ್ಕೃತಿ, ಪು.೧೫೦, ೧೫೨). ಶ್ರೀಮಧ್ವಾಚಾರ್ಯರಿಂದ ಪ್ರಣೀತವಾದ ಈ ತತ್ತ್ವವನ್ನು ಒಂದು ನಿಶ್ಚಿತ ಸಾಧನೆಯ ವಿಧಾನವನ್ನಾಗಿ ಅಳವಡಿಸಿಕೊಂಡವರು ಹರಿದಾಸರು. ಅವರ ಅನೇಕ ರಚನೆಗಳಲ್ಲಿ ಈ ತತ್ತ್ವಕ್ಕೆ ಪ್ರಾಧಾನ್ಯವಿರುವುದನ್ನು ಕಾಣಬಹುದು.

ಸರ್ವ ಸ್ವತಂತ್ರ ಹರಿ ತಾನು ಸೂತ್ರ ನಾಟಕ
ಸರ್ವ ಚೇಷ್ಟಿ ತಾ ಮಾಡಿಸೆ ಕೀರ್ತಿ ಅಪಕೀರ್ತಿ
ಜೀವರ್ಗೆ ತಂದೀವ .....

ಹರಿ ಮಾಡಿಸಿದಂತೆ ಎಲ್ಲ ಮಾಡುವೆನಯ್ಯಾ ನಾನು .....
ಹರಿಯೆ ಸ್ವತಂತ್ರ ಆನು ಅಸ್ವತಂತ್ರ .....

ನಿನ್ನ ಚಿತ್ತಕ್ಕೆ ಬಂದುದನು ಮಾಡು ಸರ್ವೇಶ
ಎನ್ನ ಸ್ವಾತಂತ್ರ್ಯ ಲವಮಾತ್ರ ಉಂಟೇ ಸ್ವಾಮಿ .....

ನೀನೆ ಆಡಿಸದಿರಲು ಜಡ ಒನಕೆಯ ಬೊಂಬೆ
ಏನು ಮಾಡಲು ಬಲ್ಲುದು ತಾನೆ ಬೇರೆ
ನೀನಿಟ್ಟ ಸೂತ್ರದಿಂ ಚಲಿಪವು ಕೈಕಾಲುಗಳು .....
ಯಂತ್ರವಾಹಕ ನೀನೆ ಒಳಗಿದ್ದು ಎನ್ನ ಸ್ವ–
ತಂತ್ರನೆಂದೆನಿಸಿ ಕೊಲಿಸುವರೆ ಹೇಳೊ .....

ಶ್ರೀರಾಮಕೃಷ್ಣರನ್ನು ಹಾಗೂ ಹರಿದಾಸರನ್ನು ಅಕ್ಕಪಕ್ಕದಲ್ಲಿಟ್ಟು ವಿವೇಚಿಸಿದಾಗ ಹೊರಪಡುವ ಒಂದು ಸಂಗತಿಯೆಂದರೆ, ತಾತ್ತ್ವಿಕ ಭೇದಗಳು ಸಾಧನಾಮಾರ್ಗದಲ್ಲಿ ಸಮನ್ವಯಗೊಳ್ಳಲು ಸಾಧ್ಯ ಎನ್ನುವುದು. ಇನ್ನೂ ಹಲವಾರು ಆಯಾಮಗಳಿಂದ ಇವರಿಬ್ಬರನ್ನೂ ತುಲನಾತ್ಮಕವಾಗಿ ವಿಶ್ಲೇಷಿಸಿ ಸ್ವಾರಸ್ಯಕರ ಫಲಿತಗಳನ್ನು ಪಡೆಯಬಹುದಾಗಿದೆ. ಆ ದಿಸೆಯಲ್ಲಿ ಇದು ಒಂದು ಸಣ್ಣ ಪ್ರವೇಶಿಕೆ ಮಾತ್ರ.